ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **89/2025**

ಸಿ ಡಬ್ಲ್ಯೂ ಃ**-3**

ಪಿ ಡಬ್ಲ್ಯೂ ಃ**-2**

| | |
|---|---|
| ಸಾಕ್ಷಿದಾರರ ಹೆಸರು | ಃ ಸತೀಶ |
| ತಂದೆಯ ಹೆಸರು | ಃ ಪುಟ್ಟಪ್ಪ |
| ವಯಸ್ಸು | ಃ **45** ವರ್ಷ |
| ಉದ್ಯೋಗ | ಃ ಕೂಲಿ |
| ವಾಸಸ್ಥಳ | ಃ ಮುಂಡೊಳ್ಳಿ ನಾಗಾಪುರ ಗ್ರಾಮ ಎನ್ ಆರ್ ಪುರ |

ದಿನಾಂಕಃ **27-04-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

1. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಸ್ಥಳ ಮಹಜರ್ ಹಾಗೂ ಅಮಾನತ್ತು ಮಹಜರ್ ಅನ್ನು ಮಾಡಿರುವುದಿಲ್ಲ. ಹಾಗೂ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ದಿನಾಂಕಃ 26.06.2025 ರಂದು ಮಾಡಿದ ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಅನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ಸ್ಥಳದ ಒಂದು ಪೋಟೋದಲ್ಲಿ ತಮ್ಮ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -9 ಎಂದು ಗುರುತಿಸಲಾಯಿತು. ಸಾಕ್ಷಿಯು ದಿನಾಂಕಃ 26.06.2025 ರಂದು ಎನ್ ಆರ್ ಪೋಲಿಸ್ ಠಾಣಾ ಆವರಣದಲ್ಲಿ ಮಾಡಿದ ವಾಹನ ಅಮಾನತ್ತು ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಅಮಾನತ್ತು ಮಹಜರ್ ಅನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತು ಮಹಜರ್ ಮಾಡುವ ಕಾಲಕ್ಕೆ ತೆಗೆದ ಒಂದು ಭಾವಚಿತ್ರದಲ್ಲಿ ತಮ್ಮ ಪೋಟೋವನ್ನು ಹಾಗೂ ಓಮಿನಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -11 ಎಂದು ಗುರುತಿಸಲಾಯಿತು. ನಿಪಿ-8 ಮತ್ತು 10 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. (ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಃಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ

1. ದಿಃ 26.06.2025 ರಂದು ಚಾಸಾ 6 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು 2 ರವರ ಸಮಕ್ಷಮ ದಿನಾಂಕಃ 22.06.2025 ರಂದು ಮಧ್ಯಾಹ್ನ 3.15 ಗಂಟೆಗೆ ಕನ್ಯಾಕುಮಾರಿ

ಹೋಟೇಲ್ ಕಾಂಪ್ಲೆಕ್ಸ್ ಮುಂಭಾಗದ ಎನ್ ಆರ್ ಪುರ ಕೊಪ್ಪ ಮುಖ್ಯ ರಸ್ತೆಯಲ್ಲಿ ಕೊಪ್ಪ ಕಡೆಯಿಂದ ಎನ್ ಆರ್ ಪುರ ಕಡೆಯ ಹೋಗವ ಟಾರ್ ರಸ್ತೆಯ ಎಡಬದಿಯಲ್ಲಿ ಚಾಸಾ 6 ರವರ ಬಾಬ್ತು ಕೆ.ಎ 14 ಎನ್ 3381 ಓಮಿನಿ ಕಾರನ್ನು ನಿಲ್ಲಿಸಿಕೊಂಡಿದ್ದು, ಅದೇ ವೇಳೆಗೆ ಸಿಂಸೆ ಕಡೆಯಿಂದ ಬಂದ ಕೆ.ಎ 14 ಸಿ 7379 ನಂಬರ್ ನ ಬೊಲೆರೋ ಪಿಕ್ ಅಪ್ ಚಾಲಕನು ಸದರಿ ವಾಹನವನ್ನು ಅತೀ ವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ 6 ರವರ ಕಾರಿನ ಹಿಂಬದಿಗೆ ಡಿಕ್ಕಿ ಪಡಿಸಿ ನಿಲ್ಲಿಸದೇ ಹೋದ ಸ್ಥಳ ಇದೆ ಎಂದು ತೋರಿಸಿದ ಮೇರೆಗೆ ನಮ್ಮ ಸಮಕ್ಷಮ ಬೆಳಗ್ಗೆ 11.30 ಗಂಟೆಯಿಂದ 12.00 ಗಂಟೆ ಅವಧಿಯಲ್ಲಿ ನಿಪಿ-8 ರಂತೆ ಕೃತ್ಯ ಸ್ಥಳದ ಮಹಜರ್ ಅನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 8 ರಂತೆ ಮಹಜರ್ ಮಾಡುವ ಕಾಲಕ್ಕೆ ನಿಪಿ9 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

2. ದಿನಾಂಕ: 26.06.2025 ರಂದು ಚಾಸಾ 6 ರವರು ತಮ್ಮ ವಾಹನವನ್ನು ಗುರುತಿಸಿದ ನನ್ನ ಮತ್ತು ಚಾಸಾ 2 ರವರ ಸಮಕ್ಷಮದಲ್ಲಿ ಎನ್ ಆರ್ ಪುರ ಪೋಲಿಸ್ ಠಾಣಾ ಆವರಣದಲ್ಲಿ ಓಮಿನಿ ಕಾರ್ ಸಂಖ್ಯೆ ಕೆಎ 14 ಎನ್ 3381 ಅನ್ನು ಪೋಲಿಸರು ತಮ್ಮ ಪೋಲಿಸ್ ಠಾಣಾ ಆವರಣದಲ್ಲಿ ಪರೀಶಿಲಿಸಿ ಅದನ್ನು ನಮ್ಮ ಸಮಕ್ಷಮ ಮದ್ಯಾಹ್ನ 12.05 ರಿಂದ 12.35 ರ ಅವಧಿಯಲ್ಲಿ ನಿಪಿ-10 ರಂತೆ ಅಮಾನತ್ತು ಮಹಜರ್ ಅನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-10 ರಂತೆ ಮಹಜರ್ ಮಾಡುವ ಕಾಲಕ್ಕೆ ನಿಪಿ-11 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ನಿಪಿ8 ರಂತೆ ಕೃತ್ಯ ಸ್ಥಳದ ಮಹಜರ್ ಅನ್ನು ಹಾಗೂ ನಿಪಿ10 ರಂತೆ ಅಮಾನತ್ತು ಮಹಜರ್ ಅನ್ನು ಮಾಡಿ ನಮಗೆ ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಕೃತ್ಯ ಸ್ಥಳ ಹಾಗೂ ಅಮಾನತು ಮಹಜರ್ ಅನ್ನು ಮಾಡಿದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ: